ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಎನ್.ಎಸ್.ಪಿ. ಮುಂತಾದ ಕೆಲವು ಯೋಜನೆಗಳಲ್ಲಿ 1996-97ರಲ್ಲಿ 1-10-96ರ ನಂತರ ಹಣ ಹೂಡಿದವರಿಗೆ ಶೇಕಡ2 ರಂತೆ ಇನ್ಸೆಂಟಿವ್ ನೀಡಲಾಗುವುದೆಂದು ಘೋಷಿಸಲಾಗಿತ್ತು. ಅದರಂತೆ ಇನ್ಸೆಂಟಿವ್ ನೀಡಲಾಗುತ್ತಿದೆ.

ಆ) ಹಣ ಹೂಡಿದವರಿಂದ ಇನ್ಸೆಂಟಿವಗಾಗಿ 1,51,469 ಕ್ಲೇಂಗಳು ಬಂದಿದ್ದು ಅವುಗಳಲ್ಲಿ 46,336ನ್ನು ಪಾವತಿ ಮಾಡಲಾಗಿದೆ. ಉಳಿದವನ್ನು ಪಾವತಿ ಮಾಡಲಾಗುತ್ತಿದೆ.

ಇ) ಪರಿಶೀಲಿಸಲಾಗುವುದು.

ರಸ್ತೆಗಳ ದುರಸ್ಥಿಗೆ ಗ್ಯಾಂಗ್‌ಮನ್‌ಗಳ ಕೊರತೆ

2307 - ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆಗೆ (ಅಭಿವೃದ್ಧಿ) ಗ್ಯಾಂಗ್‌ಮನ್‌ಗಳು ಇಲ್ಲದೇ ರಸ್ತೆಗಳಲ್ಲಿ ಹೊಂಡಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುವುದನ್ನು ತಡೆಗಟ್ಟಲು ಸರಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆಗೆ (ಅಭಿವೃದ್ಧಿಗೆ) ಹಾಗೂ ರಸ್ತೆಗಳಲ್ಲಿ ಗುಂಡಿಗಳು ತುಂಬುವ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆ -ದಾರರಿಗೆ ವಹಿಸಿ ಕೊಡಲಾಗುತ್ತದೆ. ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕೇಸುಗಳ ತ್ವರಿತ ವಿಲೇವಾರಿ

2308 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಮೂರು ತಾಲ್ಲೂಕಿನಲ್ಲಿ ಎಷ್ಟು ಕೇಸುಗಳು ವಿಲೇವಾರಿಯಾಗದೆ ಬಾಕಿ ಇವೆ? ಅದರಲ್ಲಿ ಕ್ರಿಮಿನಲ್ ಕೇಸುಗಳು ಎಷ್ಟು ಮತ್ತು ಸಿವಿಲ್ ಕೇಸುಗಳು ಎಷ್ಟು?

ಆ) ತ್ವರಿತವಾಗಿ ವಿಲೇವಾರಿ ಮಾಡಲು ಏನೇನು ಕ್ರಮ ಕೈಗೊಳ್ಳಲಾಗಿದೆ?